ನಾವು ಪ್ರಶ್ನೆ ಮಾಡುತ್ತೇವೆ. ಆದರೆ ಆ ತೀರ್ಪನ್ನೇ ಕೊಡದೆ ನೀವು ಒಂದು ಕಡೆ ನಿಮ್ಮ ತೀರ್ಪನ್ನು ಗೌಪ್ಯವಾಗಿ ಇಟ್ಟು, ಆ ತೀರ್ಪಿನ ಬಗ್ಗೆ ಎಲ್ಲಿಯೂ ಮಾತನಾಡದೆ ಯಾರು ಅಸಿಂಧುವಾಗಿ ಈ ಸದನಕ್ಕೆ ಸದಸ್ಯರಾಗುವುದಕ್ಕೆ ಆಗುವುದಿಲ್ಲ, ಈ ಸದನದ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾರೆ ಮತ್ತು ಈ ಸದನದಲ್ಲಿ ಅವರು ಭಾಗವಹಿಸಬಾರದೆನ್ನುತಕ್ಕಂಥ ಪ್ರಶ್ನೆ ಬಂದಾಗ..

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ನಾನು Point of Order rise ಮಾಡುತ್ತಿದ್ದೇನೆ. ಗೌರವಾನ್ವಿತ ಮಾನ್ಯ ನಾಗರಾಜ್‌ರವರು ಈ ಮನೆಗೆ ಬಹಳ ಹಿರಿಯ ಸದಸ್ಯರು. ನಿಮಗೆ ಅನುಕೂಲ ಬಂದಾಗ ಅನುಕೂಲಕ್ಕೆ ತಕ್ಕಂತೆ ಮಾತನಾಡುವುದಕ್ಕಿಂತ ದಯಮಾಡಿ ನಾನು ಹೇಳುವುದನ್ನು ಕೇಳಿ. ಮಾನ್ಯ ಸ್ಪೀಕರ್‌ರವರು ಬಹಳ ಸ್ಪಷ್ಟವಾಗಿ ಶ್ರೀ ಕುಮಾರಸ್ವಾಮಿಯವರನ್ನು ಸಭಾನಾಯಕರು ಎಂದು ಅವರು ಘೋಷಣೆ ಮಾಡಿದ ಮೇಲೆ, ತೀರ್ಪನ್ನು ಕೊಟ್ಟ ಮೇಲೆ ಅದನ್ನು ಪ್ರಶ್ನೆ ಮಾಡುವಂಥ ಹಕ್ಕು ನಿಮಗೆ ಇಲ್ಲ. ಇದು ಮೊದಲನೆಯದು. ಎರಡನೆಯದಾಗಿ, ನೀವೇನಾದರೂ ತಕರಾರು ಮಾಡಿ ಅವರ ತೀರ್ಪು ಬೇಕೆಂದು ಕಾದಿದ್ದರೆ ಅದಕ್ಕೆ ಸಮಯಾವಕಾಶ ಬೇಕು. Confidence motion move ಆದಮೇಲೆ ಆವತ್ತು ಏನು ಗೊಂದಲದಿಂದ ಸದನ ಮುಗಿಯಿತು, ಮತ್ತೆ ಇವತ್ತೇ ಸದನ ಸೇರಿರುವಂಥಾದ್ದು. ಇವತ್ತು ಸದನ ಸೇರಿರುವುದರ ಒಂದೇ ಒಂದು ಉದ್ದೇಶವೇನೆಂದರೆ, ಮಾನ್ಯ ರಾಜ್ಯಪಾಲರ ಆದೇಶದಂತೆ ಮುಖ್ಯಮಂತ್ರಿಗಳಾಗಿ ಅವರ ಒಂದು Confidence motion move ಮಾಡಿದ್ದಾರೆ. ಆ ತೀರ್ಮಾನ ಇವತ್ತು ಆಗಬೇಕು. ಅದಾದಮೇಲೆ ಸದನದ ಕಾರ್ಯಕಲಾಪ ಮುಂದುವರಿಯುತ್ತದೆ. ಮಾನ್ಯ ಸ್ಪೀಕರ್‌ರವರು ನೀವು ಕೊಟ್ಟಂಥ ಅನೇಕ ತಕರಾರುಗಳಿಗೆ ಉತ್ತರ ಕೊಡುವುದಕ್ಕೆ ಅವಕಾಶವೂ ಸಹ ಇರುತ್ತದೆ. ಅದು ಬಿಟ್ಟು ಹಿರಿಯ ಸದಸ್ಯರಾಗಿ ಮಾನ್ಯ ಸ್ಪೀಕರ್‌ರವರ ತೀರ್ಮಾನವನ್ನು ಪ್ರಶ್ನೆ ಮಾಡತಕ್ಕಂಥಾದ್ದು ಸರಿಯಲ್ಲ. ಈ ಸದನದಲ್ಲಿ ಸತ್‌ಸಂಪ್ರದಾಯ ಏನು ಬೆಳೆದುಕೊಂಡು ಬಂದಿದೆ ಇದರಿಂದ ಈ ಮನೆಗೆ ಗೌರವ ಇದೆ. ಅದನ್ನು ಪ್ರಶ್ನೆ ಮಾಡುವಂಥಾದ್ದನ್ನು ಈ ಕೆಲಸವನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಮಾಡಬಾರದಾಗಿತ್ತು. ಸಮಯ ಬಂದಾಗ ಆ ಪ್ರಶ್ನೆಯನ್ನು ಕೇಳಿ. ಹೈಕೋರ್ಟ್‌ನವರು ನಿಮಗೆ ಹೇಳಲಿಲ್ಲವೇ? ನೀವು ಆ ಪಕ್ಷದ ಸದಸ್ಯನಲ್ಲದೆಯೇ ಬೇರೆ ಯಾವುದೋ ಕಾರಣವನ್ನು ಇಟ್ಟುಕೊಂಡು ಕೋರ್ಟ್‌ಗೆ ಹೋದಾಗ ಕೋರ್ಟ್ ಬಹಳ ಸ್ಪಷ್ಟವಾಗಿ ನಿಮಗೆ ಏನು ಹೇಳಬೇಕೋ ಅದನ್ನು ಹೇಳಿದ್ದಾರೆ. ಅದನ್ನು ಈಗ ಪ್ರಶ್ನೆ ಮಾಡುವುದು ಸರಿನಾ? ಉದಾಹರಣೆಗೆ, ಈ ಧರ್ಮಸಿಂಗ್‌ರ ನೇತೃತ್ವದ ಸರ್ಕಾರ ಏಕೆ ಹೋಯಿತು? ಶ್ರೀ ಕುಮಾರಸ್ವಾಮಿಯವರು ಏನು ಹೇಳಿದರು? ಆ ಬಗ್ಗೆ ಅವರದ್ದೇ ಆದಂಥ ಅನೇಕ ವಿಚಾರಗಳನ್ನು ಹೇಳಿದ್ದಾರೆ. 'ನಮ್ಮ ತಂದೆಗೆ ಅಪಮಾನ ಆಯಿತು ನಮ್ಮ ಶಾಸಕರುಗಳ ಗೌರವವನ್ನು ಮೀರುವಂಥ ಪರಿಸ್ಥಿತಿ ಕೈಮೀರಿ ಹೋಗಿತ್ತು. ಅದಕ್ಕಾಗಿಯೇ ನಾನು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ' ಎಂದು ಹೇಳಿ ಅನೇಕ ಬಾರಿ ಮಾನ್ಯ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರು ಹೇಳಿದ್ದಾರೆ. ಅದನ್ನು ಚರ್ಚೆ ಮಾಡೋಣ. ಅದನ್ನು ಬಿಟ್ಟು ತತ್ವ, ನೀತಿ, ಸಿದ್ಧಾಂತವನ್ನು ಬಿಟ್ಟು ನಿಂತಿದ್ದೇವೆಂದು ಅವರು ಹೇಳಲಿಲ್ಲ. ಬೇಡವಾದ ಮಾತನ್ನು ಅವರ ಬಾಯಿಂದ ಹೇಳಿಸಿ ಈ ರೀತಿಯ ಹಿರಿಯ ಸದಸ್ಯರಾಗಿ ಗೊಂದಲ ಉಂಟುಮಾಡುವಂಥ ಕೆಲಸ ಮಾಡಿದ್ದಾರೆ. ನೀವೇ ಯಾರ ಪರ ಇದ್ದೀರಿ ಎನ್ನುವುದನ್ನು ಸ್ಪಷ್ಟ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಮೊದಲಿನಿಂದಲೂ ನನ್ನ ಪರವಾಗಿಯೇ ಇಲ್ಲಿ ಕುಳಿತಿದ್ದೇನೆ. ಇನ್ಯಾರ ಪರ ಇದ್ದೇನೆಂದು ಹೇಳಬೇಕಾಗಿಲ್ಲ. ನೀವು ಈ ಕಡೆ ಇದ್ದವರು ಆ ಕಡೆಗೆ ಹೋಗಿದ್ದೀರಿ. ಇನ್ನು ಯಾವತ್ತು ಈ ಕಡೆಗೆ ಬರುತ್ತೀರೋ ಗೊತ್ತಿಲ್ಲ. ಆ ವಿಚಾರ ಬೇರೆ. ನಾನಂತೂ ಒಂದೇ ಕಡೆ ಒಂದೇ ಸಿದ್ಧಾಂತ, ತತ್ವದಲ್ಲಿ ಕುಳಿತಿದ್ದೇನೆ. ನಿಮಗೆ ಗೊತ್ತಿರಬಹುದು. ನಾನು ಬಹಳ ವರ್ಷಗಳಿಂದ ಇಲ್ಲಿ ಇದ್ದೇನೆ. ಆದ್ದರಿಂದ ಮಾನ್ಯ ಯಡಿಯೂರಪ್ಪನವರೇ, ಈಗಲಾದರು ನಿಮ್ಮ ಸಿಟ್ಟು ಬಿಟ್ಟುಹೋಗುತ್ತದೆಂದು ನಾನು ಅಂದುಕೊಂಡಿದ್ದೆ. ತಾವು ಉಪ ಮುಖ್ಯಮಂತ್ರಿಗಳಾದ ಮೇಲೆಯಾದರೂ ನಿಮ್ಮ ಸಿಟ್ಟು, ಆ ಒಂದು ರಕ್ತದ ಒತ್ತಡ ಎಲ್ಲ ಹೋಗುತ್ತದೆಂದು ನಾನು ಅಂದುಕೊಂಡಿದ್ದೆ. ಆದರೆ ನಿಮ್ಮ ಸಿಟ್ಟನ್ನು ನೋಡಿದರೆ ಏಕೋ ಇನ್ನೂ ಆ ಸಿಟ್ಟನ್ನು ಬಿಟ್ಟಿಲ್ಲ. ನಮ್ಮ ಸ್ನೇಹಿತರಾದ ನಿಮ್ಮ ಬಗ್ಗೆ ನನಗೆ ಬಹಳ ಗೌರವವಿದೆ. ತಾವು ಇಲ್ಲಿ ಇದ್ದಿರಿ. ಇಲ್ಲಿ ಕುಳಿತಿದ್ದಾಗ ಅನೇಕ ಸಾರಿ ನಿಮ್ಮ ವಿಚಾರಧಾರೆಗಳಿಗೆ ನಾನು ಬೆಂಬಲ ಕೊಟ್ಟಿದ್ದೇನೆ. ಅನೇಕ ಬಾರಿ ನನ್ನ ಸಲಹೆಗಳನ್ನು ಕೇಳಿದ್ದೀರಿ. ನಾವು ನೀವು ಇಲ್ಲಿ ಒಟ್ಟಾಗಿ ಇದ್ದೆವು. ಆದರೆ, ಮುಖ್ಯಮಂತ್ರಿಯಾದವರು ಹೇಳಬೇಕಾದಂಥ ವಿಚಾರಕ್ಕೆ ನೀವು ವಕಾಲತ್ತು ವಹಿಸುವಂಥಾದ್ದು ಸರಿ ಕಾಣಲಿಲ್ಲ. ಅವರೇ ಹೇಳುತ್ತಾರೆ. ಅವರಿಗೆ ಶಕ್ತಿ ಇದೆ. ಯಾವ ಕಾರಣಕ್ಕೆ ಬಿಟ್ಟಿದ್ದೇವೆ? ಯಾವ ಕಾರಣಕ್ಕೆ ಬಂದಿದ್ದೇವೆ, ಇವುಗಳ ಬಗ್ಗೆ ಹೇಳತಕ್ಕಂಥ ಶಕ್ತಿ ಅವರಿಗೆ ಇದೆ. ಅದರ ಬಗ್ಗೆ ನೀವು ವಾದ ಮಾಡಿಕೊಂಡು ಹೋಗುವುದನ್ನು ನೋಡಿದರೆ ಎಷ್ಟು ಸಿಟ್ಟುಗೊಂಡಿದ್ದೀರಿ ಎನ್ನತಕ್ಕಂಥದ್ದು ಗೊತ್ತಾಗುತ್ತದೆ. ನೀವು ಯಾರ ಪರ ಇದ್ದೀರೆಂದು ಕೇಳಿದರೆ, ನಾನು ನನ್ನ ಪರವೇ ಇದ್ದೇನೆ. ಇನ್ನು ಯಾರ ಪರವೂ ಇರುವುದಕ್ಕೇ ಸಾಧ್ಯವಿಲ್ಲ. ನನ್ನ ಪರ ಅಂತೂ ನಾನು ಇದ್ದೇನೆ. ಮಾನ್ಯ ಉಪಾಧ್ಯಕ್ಷರೆ, ತಮಗೆ ನಾನು ಹೇಳುತ್ತೇನೆ. XXX ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸದಸ್ಯತ್ವವನ್ನು ಕಳೆದುಕೊಂಡಿದ್ದಾರೆ. 38 ಜನ ಸದಸ್ಯರು ತಮ್ಮ ಸಡಸ್ಯತ್ವವನ್ನು ಕಳೆದುಕೊಂಡಿದ್ದಾರೆ. XXX

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಕ್ರಿಯಾಲೋಪ ಎತ್ತಿದ್ದಾರೆ. ಅವರು ಕ್ರಿಯಾಲೋಕ ಎತ್ತಿ, ತಮ್ಮ ವಾದವನ್ನು ತಮ್ಮ ಮುಂದೆ ಮಂಡಿಸಿದ್ದಾರೆ. ತಾವು ತೀರ್ಮ ಕೊಡಬೇಕು. ಅವರ ಕ್ರಿಯಾಲೋಪವನ್ನು ಎತ್ತಿ ಹಿಡಿದಿದ್ದೀರಾ? ತಳ್ಳಿ ಹಾಕಿದ್ದೀರಾ? ಇವರು ಆ ವಿಚಾರ ಪ್ರಸ್ತಾಪ ಮಾಡಿರುವುದು, ನಮಗೆ ಏನೂ ಗೊತ್ತಾಗುತ್ತಿಲ್ಲ. ಕ್ರಿಯಾಲೋಪ ಈಗ ತಮ್ಮ ಮುಂದೆ ಇದೆ. That is the property of the House. You have to give your ruling. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ರಾಜ್ಯಪಾಲರ ನಿರ್ದೇಶನದ ಮೇರೆಗೆ ವಿಶ್ವಾಸ ಮತ ಯಾಚನೆ ಬಿಟ್ಟು ಬೇರೆ ಒಂದು ವಿಚಾರ ಸದನದ ಮುಂದೆ ಇಲ್ಲ. ಅದರ ಚರ್ಚೆಗೆ ಹೋಗೋಣ ಉಳಿದದ್ದೆಲ್ಲ ಅಗತ್ಯವಿಲ್ಲ? ಅನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವ ವೇಳೆಗೆ ಅವರು ಕೊಟ್ಟಿರತಕ್ಕಂಥ ಅರ್ಜಿ ಅದರ ವಿಚಾರಕ್ಕೆ ಸಂಬಂಧಿಸಿದ್ದು, ಕೋರ್ಟ್ ಮುಂದೆ ಇರತಕ್ಕದ್ದು ಹೇಳಿದ್ದಾರೆ. ಅವರು ಮಾತನಾಡುತ್ತಾ ಇರತಕ್ಕಂಥ ಧಾಟಿ ನೋಡಿದರೆ, ಸನ್ಮಾನ್ಯ ಸಭಾ ನಾಯಕರ ಸದಸ್ಯತ್ವದ ಸಿಂಧುತ್ವವನ್ನೇ ನಾವು ಪ್ರಶ್ನೆ ಮಾಡಿದ್ದೇವೆ, ಅವರು ಸದಸ್ಯರೇ ಅಲ್ಲದಿರುವ ವೇಳೆಗೆ ನಾಯಕರಾಗುವುದು ಎಲ್ಲಿಂದ ಉದ್ಭವವಾಗುತ್ತದೆ ಎನ್ನುವ ಧಾಟಿಯಲ್ಲಿ ಅವರು ಮಾತನಾಡಿದ್ದಾರೆ. ತಾವು, you have to give the ruling. ನಾವು ಮುಂದಕ್ಕೆ ಹೋಗಬೇಕಲ್ಲಾ..

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.